ವಿ.ವಿಗಳಲ್ಲಿ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಜುಲೈ 1ರಿಂದ ಪಿಎಚ್‌.ಡಿ ಕಡ್ಡಾಯ– ಯುಜಿಸಿ

ನೇಮಕಾತಿ ವಿಳಂಬ: ಅವಕಾಶ ಕೈತಪ್ಪುವ ಆತಂಕ

• ರಾಜೇಶ್ ರೈ ಚಟ್ಲ

ಮುಖ್ಯಾಂಶಗಳು

- 2023 ಜೂನ್ 30ರವರೆಗೆ ವಿಸ್ತರಿಸಲು ಮನವಿ
- ಅಭ್ಯರ್ಥಿಗಳಿಗೆ ಅನ್ಯಾಯ-ವಾಗಲಿದೆ- ವಾದ
- ನೆಟ್, ಕೆ- ಸೆಟ್ ಪಾಸಾದವರಲ್ಲಿ ಆತಂಕ

ಪ್ರಜಾವಾಣಿ ವಿಶೇಷ

ಬೆಂಗಳೂರು: ರಾಜ್ಯದ ವಿವಿಧ ವಿಶ್ವ-ವಿದ್ಯಾಲಯಗಳಲ್ಲಿ 950ಕ್ಕೂ ಹೆಚ್ಚು ಸಹಾಯಕ ಪ್ರಾಧ್ಯಾಪಕ ಹುದ್ದೆಗಳು ಖಾಲಿ ಇದ್ದು, ಸರ್ಕಾರ ನೇಮಕಾತಿ ನಡೆಸದೇ ಇದ್ದುದರಿಂದ ರಾಷ್ಟ್ರೀಯ ಅರ್ಹತಾ ಪರೀಕ್ಷೆ (ನೆಟ್) ಅಥವಾ ಕೆ-ಸೆಟ್ (ಕರ್ನಾಟಕ ರಾಜ್ಯ ಉಪನ್ಯಾಸಕರ ಅರ್ಹತಾ ಪರೀಕ್ಷೆ) ತೇರ್ಗಡೆಯಾ-ಗಿರುವ ಅಭ್ಯರ್ಥಿಗಳು ಹುದ್ದೆ ವಂಚಿತರಾಗುವ ಆತಂಕ ಎದುರಾಗಿದೆ.

ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) 2018ರ ಜುಲೈ 18ರಂದು ಹೊರಡಿಸಿರುವ ಅಧಿಸೂಚನೆಯ ಪ್ರಕಾರ ಇದೇ ಜುಲೈ 1ರಿಂದ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಪಿಎಚ್. ಡಿ (ಡಾಕ್ಟರ್ ಆಫ್ ಫಿಲಾಸಫಿ) ಕಡ್ಡಾಯ. ಒಂದೂವರೆ ವರ್ಷದ ಹಿಂದೆಯೇ ರಾಜ್ಯ ಸರ್ಕಾರ ನೇಮಕಾತಿ ಪ್ರಕ್ರಿಯೆ ನಡೆಸಿದ್ದರೆ ನೆಟ್, ಕೆ-ಸೆಟ್ ಪಾಸಾದವರೂ ಅರ್ಹ-ರಾಗುತ್ತಿದ್ದರು. ಸರ್ಕಾರದ ವಿಳಂಬ ಧೋರಣೆಯಿಂದಾಗಿ ಸಹಾಯಕ ಪ್ರಾಧ್ಯಾಪಕ ಹುದ್ದೆಯ ಆಕಾಂಕ್ಷಿ-ಗಳಾಗಿರುವವರು ತಮ್ಮದಲ್ಲದ ತಪ್ಪಿಗೆ ಅರ್ಹತೆಯನ್ನೇ ಕಳೆದುಕೊಳ್ಳುವಂತಾಗಿದೆ. ಈಗ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯುವ ಮೂಲಕ ರಾಜ್ಯ ಸರ್ಕಾರವು ತನ್ನ ತಪ್ಪನ್ನು ಮರೆಮಾಚಿಕೊ-ಳ್ಳಲು ಮುಂದಾಗಿದೆ ಎಂದು ಅಭ್ಯರ್ಥಿಗಳು ದೂರಿದ್ದಾರೆ.

‘ಯುಜಿಸಿ 2018ರಲ್ಲಿಯೇ ಅಧಿಸೂಚನೆ ಹೊರಡಿಸಿ, ಸಹಾಯಕ ಪ್ರಾಧ್ಯಾಪಕ ಹುದ್ದೆಗಳ ನೇಮಕಾತಿಗೆ ಪಿಎಚ್.ಡಿ ಕಡ್ಡಾಯಗೊಳಿಸುವ ಬಗ್ಗೆ ತಿಳಿಸಿದ್ದರೂ ಸರ್ಕಾರ ನೇಮಕಾತಿ ನಡೆಸಲಿಲ್ಲ. ಇದರಿಂದಾಗಿ ಹುದ್ದೆ ಗಿಟ್ಟಿಸಿಕೊಳ್ಳಲು, ನೆಟ್, ಕೆ-ಸೆಟ್ ಪಾಸಾಗಿ, ಸರ್ಕಾರದಿಂದ ನೇಮಕಾತಿ ಪ್ರಕಟಣೆ ನಿರೀಕ್ಷೆಯಲ್ಲಿದ್ದವರ ಕನಸಿಗೆ ಸರ್ಕಾರವೇ ತಣ್ಣೀರು ಎರಚಿದೆ’ ಎಂದು ಹುದ್ದೆ ಆಕಾಂಕ್ಷಿಯೊಬ್ಬರು ಅಳಲು ತೋಡಿಕೊಂಡರು.

ಪತ್ರದಲ್ಲಿ ಏನಿದೆ: ‘ಕೋವಿಡ್ ಸಾಂಕ್ರಾಮಿಕದಿಂದ ರಾಜ್ಯದ ಆರ್ಥಿಕ ಸ್ಥಿತಿಯ ಮೇಲೆ ಗಂಭೀರ ಪರಿಣಾಮವಾಗಿದೆ. ಅಲ್ಲದೆ, ರಾಜ್ಯದ ಆರ್ಥಿಕ ಸಂಪನ್ಮೂಲವನ್ನು ಈ ಸಾಂಕ್ರಾಮಿಕದ ನಿಯಂತ್ರಣಕ್ಕೆ ಸರ್ಕಾರ ಬಳಕೆ ಮಾಡಿದೆ. ಹೀಗಾಗಿ, ಯಾವುದೇ ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕ ಹುದ್ದೆಗಳನ್ನು ಭರ್ತಿ ಮಾಡಲು ಸಾಧ್ಯವಾಗಿಲ್ಲ’ ಎಂದು ಉನ್ನತ ಶಿಕ್ಷಣ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಿ. ಕುಮಾರ ನಾಯಕ ಅವರು ಯುಜಿಸಿ ಕಾರ್ಯದರ್ಶಿ ರಜನೀಶ್ ಜೈನ್ ಅವರಿಗೆ ಪತ್ರ ಬರೆದಿದ್ದಾರೆ.

‘ನೆಟ್ ಮತ್ತು ಸೆಟ್ ಪಾಸಾಗಿ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಸಾವಿರಾರು ಅಭ್ಯರ್ಥಿಗಳು ಅರ್ಹತೆ ಹೊಂದಿದ್ದರೂ ಖಾಲಿ ಇರುವ ಹುದ್ದೆಗಳ ಭರ್ತಿಗೆ ಒಂದೂವರೆ ವರ್ಷದಿಂದ ಪ್ರಕಟಣೆ ಹೊರಡಿಸದೇ ಇದ್ದುದರಿಂದ ಅವರಿಗೆ ಅರ್ಜಿ ಸಲ್ಲಿಸಲು ಅವಕಾಶ ಸಿಕ್ಕಿಲ್ಲ. ಜುಲೈ 1ರಿಂದ ಪಿಎಚ್. ಡಿ ಅರ್ಹತೆ ಕಡ್ಡಾಯಗೊಳಿಸಿದರೆ ಈ ಅಭ್ಯರ್ಥಿಗಳು ಸಹಾಯಕ ಪ್ರಾಧ್ಯಾಪಕ ಹುದ್ದೆ ಪಡೆಯಲು ಅನರ್ಹರಾಗುತ್ತಾರೆ. ಈ ಅಭ್ಯರ್ಥಿಗಳಿಗೆ ಅನ್ಯಾಯ ಆಗಲಿದೆ’ ಎಂದೂ ಪತ್ರದಲ್ಲಿ ಉಲ್ಲೇಖಿಸಲಾಗಿದೆ.

‘ಪಿಎಚ್.ಡಿ ಕಡ್ಡಾಯಗೊಳಿಸಿ ನಿಗದಿಪಡಿಸಿರುವ ಅವಧಿಯನ್ನು ಮುಂದೂಡುವಂತೆ ಸಂಘಟನೆಗಳು, ಜನಪ್ರತಿನಿಧಿಗಳೂ ಸೇರಿದಂತೆ ವಿವಿಧ ವಲಯಗಳಿಂದ ಹಲವು ಮನವಿಗಳು ಬಂದಿವೆ. ಖಾಲಿ ಇರುವ ಈ ಹುದ್ದೆಗಳನ್ನು ತುಂಬಲು ರಾಜ್ಯ ಸರ್ಕಾರ ಮುಂದಾಗದೇ ಇದ್ದುದರಿಂದ, ತಮ್ಮ ತಪ್ಪು ಇಲ್ಲದಿದ್ದರೂ ಅಭ್ಯರ್ಥಿಗಳು ಹುದ್ದೆ ಗಿಟ್ಟಿಸಿಕೊಳ್ಳುವ ಅವಕಾಶದಿಂದ ವಂಚಿತರಾಗಲಿದ್ದಾರೆ. ದೇಶದ ಇತರ ರಾಜ್ಯಗಳಲ್ಲೂ ಇದೇ ಪರಿಸ್ಥಿತಿ ಇರುವ ಸಾಧ್ಯತೆ ಇದೆ. ಹೀಗಾಗಿ, ನೆಟ್, ಕೆ-ಸೆಟ್ ಅರ್ಹತೆ ಹೊಂದಿವರಿಗೆ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಅರ್ಜಿ ಸಲ್ಲಿಸುವ ಅವಕಾಶ ಕಲ್ಪಿಸಬೇಕಿದೆ. ಆ ಮೂಲಕ, ಈ ಅಭ್ಯರ್ಥಿಗಳ ಹಿತ ಕಾಪಾಡಲು ಪಿಎಚ್.ಡಿ ಕಡ್ಡಾಯ-ಗೊಳಿಸಿರುವುದನ್ನು ಮುಂದೂಡಲೇ ಬೇಕು’ ಎಂದೂ ಪತ್ರದಲ್ಲಿ ಮನವಿ ಮಾಡಲಾಗಿದೆ.

ಕೋವಿಡ್ ನೆಪ ಹೇಳಿದ ಸರ್ಕಾರ!

ತಡವಾಗಿ ಎಚ್ಚೆತ್ತುಕೊಂಡಿರುವ ರಾಜ್ಯ ಸರ್ಕಾರ ಜೂನ್ 15ರಂದು, ಯುಜಿಸಿ ಕಾರ್ಯದರ್ಶಿ ರಜನೀಶ್ ಜೈನ್ ಅವರಿಗೆ ಪತ್ರ ಬರೆದು, ‘ಪಿಎಚ್. ಡಿ ಕಡ್ಡಾಯ ನಿಯಮವನ್ನು ಇನ್ನೂ ಎರಡು ವರ್ಷ (2023 ಜೂನ್ 30) ಮುಂದೂಡಬೇಕು’ ಎಂದು ಮನವಿ ಮಾಡಿದೆ.

ಅಷ್ಟೇ ಅಲ್ಲದೆ, ಕೋವಿಡ್ ಕಾರಣದಿಂದ ಒಂದೂವರೆ ವರ್ಷದಿಂದ ನೇಮಕಾತಿ ನಡೆಸಲು ಸಾಧ್ಯ ಆಗಿಲ್ಲ ಎಂದೂ ಕಾರಣ ಹೇಳಿದೆ. ಆದರೆ, ಈ ಪತ್ರಕ್ಕೆ ಯುಜಿಸಿಯಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ ಎಂದು ಉನ್ನತ ಶಿಕ್ಷಣ ಇಲಾಖೆ ಮೂಲಗಳು ತಿಳಿಸಿವೆ.

01-07-2021 Pv Pg 3D

Human impact on monsoon could exceed natural changes

AKHIL KADIDAL

Asian monsoons impact the lives of more than a third of humanity. A new study has found that the human impact on monsoonal rainfall could exceed the changes wrought naturally over the last 30 million years.

Scientists said that this is because of the important influence of CO2 on the strength of the monsoon.

The study, which was conducted by a large cross-section of researchers from The Open University (OU) in the United Kingdom, found that East Asian and Indian monsoon rainfall amounts have evolved in response to tectonic and climate influences millions of years ago.

One surprising finding was the overturning of a widely-held assumption that the Indian monsoon is almost entirely the result of the uplift of Tibet and the Himalayas.

The study provides a strong indication that the rise of these mountains is only one of several important factors, explained Professor Nigel Harris, Professor Emeritus, OU, and an expert in tectonics. "For example, the impact of closing the Panama gateway on the Indian monsoon is a fascinating example of how elements of the Earth's climate may be influenced by factors many thousands of miles away," he said. The Panama gateway refers to the water connection between Pacific and Atlantic oceans which was open millions of years ago but is not any longer.

Researchers found that the Indian monsoon rainfall amount, in particular, has been sensitive to a complex mix of drivers in the past, particularly CO2 and ice sheets changes.

The findings were made after researchers modelled the evolution of Asian monsoon rainfall over the last 30 million years, considering the effects of Himalayan-Tibetan growth, evolving atmospheric CO2, the growth and decay of continental ice sheets, changes to ocean circulation due to shifting continental plates, and changes to Earth's orbit.



Large-scale study

"The study used a quarter of a million data points of changes to the major climate drivers over the last 30 million years to calculate how monsoon rainfall has varied. This was done separately for India and South-East Asia," explained Dr James R Thomson, a freelance engineering consultant involved in the project. "The achieved level of detail of rainfall changes has never been possible before. The results aid judgments about the future effects of rising CO2 levels."

The researchers said that although these different drivers have all been modelled separately before, it has never been possible to study how they work together because of the huge computing requirements.

"We used a statistical approach called emulation to get around this," said Dr Phil Holden, senior lecturer in Earth System Science, OU. "The new study considers eight 'forcing factors' together using a few hundred simulations with a low-resolution ocean-atmosphere General Circulation Model to derive statistical models for the Indian and South-East Asian monsoons. These models were applied to reconstruct rainfall for the past 30 million years at exceptionally high temporal resolution (over 1000 year segments) and to quantify the relative significance of the different drivers in controlling annual rainfall which is dominant in summer months."

Dr Anand added that further validation of findings that the ice-sheet and CO2 have competing effects on Indian monsoon rainfall is needed through proxy-based rainfall reconstructions during the Pliocene and Miocene. "To study these geological time intervals, continuous sediment archives such as long cores obtained from the International Ocean Discovery Programme are necessary," she said.

The OU-led project is the first detailed evaluation of tectonic and climatic influences of Asian monsoon rainfall. The paper, Tectonic and climatic drivers of the Asian monsoon evolution, was published in *Nature Communications* on June 29.

01-07-2021 Dec Hrd Pg 14

"Create your own sunshines"

ರೋಗ ಪತ್ತೆ, ಔಷಧ ಬಳಕೆ ಇನ್ನೂ ಸರಳ | ಸಮಸ್ಯೆಗೆ ದೊರೆಯಲಿದೆ ಕೃಷಿ ವಿಜ್ಞಾನಿಗಳ ಸಲಹೆ

ರೈತರಿಗೆ ವರ, ಕೃಷಿ ಕ್ರಾಂತಿಗೆ ನೆರವಾಗಲಿದೆ ಇ-ಸ್ಯಾಪ್

■ **ಶಿವಾನಂದ ಹಿರೇಮಠ** ಬೆಂಗಳೂರು
shivanand.hiremath@timesgroup.com

ಕೀಟ ಬಾಧೆ, ಪೋಷಕಾಂಶ ಕೊರತೆಯನ್ನು ನಿರ್ದಿಷ್ಟವಾಗಿ ಗುರುತಿಸಲಾಗದೆ ಅವೈಜ್ಞಾನಿಕ ಮಾದರಿಯಲ್ಲಿ ರಾಸಾಯನಿಕ ಗೊಬ್ಬರ, ಔಷಧ ಸಿಂಪಡಣೆ ಮಾಡಿ ಅನವಶ್ಯಕ ಖರ್ಚು, ನಷ್ಟ ಅನುಭವಿಸುತ್ತಿದ್ದ ರೈತರಿಗೆ ರಾಜ್ಯ ಸರಕಾರ ಸಿಹಿಸುದ್ದಿ ನೀಡಿದೆ.

ಕೃಷಿಯನ್ನು ಬಾಧಿಸುವ ಕೀಟ, ರೋಗ ಮತ್ತು ಪೋಷಕಾಂಶಗಳ ಕೊರತೆಯನ್ನು ನಿಖರವಾಗಿ ಅರಿತು, ನಿರ್ದಿಷ್ಟ ಔಷಧವನ್ನು ನಿಖರ ಪ್ರಮಾಣದಲ್ಲಿ ಬಳಸಲು ಕೃಷಿ ವಿಜ್ಞಾನಿಗಳಿಂದ ಸ್ಥಳದಲ್ಲೇ ಮಾಹಿತಿ ನೀಡುವ 'ಇ-ಸ್ಯಾಪ್' ಆ್ಯಪ್ ಅಭಿವೃದ್ಧಿಪಡಿಸಲಾಗಿದೆ.

ಕೃಷಿ ತಜ್ಞರು ಮತ್ತು ಕೃಷಿ ವಿವಿ ಪ್ರೊಫೆಸರ್‌ಗಳ 16 ಮಂದಿ ತಂಡದ ಕಳೆದ 9 ವರ್ಷಗಳ ಸತತ ಪ್ರಯತ್ನದಿಂದ ಈ ಆ್ಯಪ್ ರೂಪುಗೊಂಡಿದೆ. ಹೈಕ ಭಾಗದ 6 ಜಿಲ್ಲೆಗಳಲ್ಲಿ 6 ವರ್ಷಗಳ ಕಾಲ ಪ್ರಾಯೋಗಿಕವಾಗಿ ಆ್ಯಪ್ ಮೂಲಕ ಸಮೀಕ್ಷೆ ನಡೆಸಲಾಗಿತ್ತು. ಒಂದು ಲಕ್ಷಕ್ಕೂ ಅಧಿಕ ರೈತರ ಹೊಲ-ಗದ್ದೆಗಳಲ್ಲಿ ನಡೆಸಿದ ಸಮೀಕ್ಷೆ ಯಶಸ್ವಿಯಾಗಿದೆ. 1000ಕ್ಕೂ ಅಧಿಕ ಕೀಟ ಬಾಧೆ, 630 ಕ್ಕೂ ಹೆಚ್ಚು ರೋಗ ಬಾಧೆ ಮತ್ತು 300 ಕ್ಕೂ ಹೆಚ್ಚು ಪೋಷಕಾಂಶಗಳ ಕೊರತೆಯನ್ನು ಕಂಡುಹಿಡಿದು ಅದಕ್ಕೆ ಪರಿಹಾರ ಕಂಡುಕೊಳ್ಳಲಾಗಿದೆ. ಈ ವರದಿ ಆಧರಿಸಿ ರಾಜ್ಯ ಸರಕಾರ ಆ್ಯಪ್ ಬಳಸಲು ಮುಂದಾಗಿದೆ. ಹವಾಮಾನ ವೈಪರೀತ್ಯ ಮತ್ತು ಕಾಲ ಬದಲಾವಣೆಯಿಂದ ಫಸಲುಗಳಿಗೆ ಕಾಡುತ್ತಿರುವ ಹೊಸ ರೋಗಗಳ ಪತ್ತೆಗೂ ಇದು ಸಹಕಾರಿ.

ಈ ಮೊದಲು ರಾಯಚೂರು ಕೃಷಿ ವಿವಿ ಸರ್ವರ್ ಮೂಲಕ ಮಾಹಿತಿ ಸಂಗ್ರಹ ಮತ್ತು ನಿಯಂತ್ರಣ ನಡೆಯುತ್ತಿತ್ತು. ಪ್ರಸ್ತುತ ಇ-ಗವರ್ನೆನ್ಸ್ ಸರ್ವರ್ ಮೂಲಕ ನಿಯಂತ್ರಿಸಲಾಗುತ್ತಿದೆ.

ಆ್ಯಪ್ ಬಳಕೆ ಹೇಗೆ?

ಆ್ಯಪ್‌ನಲ್ಲಿ ರೈತರ ಹೆಸರು, ಮೊಬೈಲ್ ಸಂಖ್ಯೆ ನೋಂದಾಯಿಸಲಾಗುತ್ತದೆ. ಕೃಷಿ ಕ್ಷೇತ್ರಕ್ಕೆ ಆಗಮಿಸುವ ಅಧಿಕಾರಿಗಳು ಬೆಳೆಗೆ ಬಾಧಿಸಿದ ರೋಗ ಲಕ್ಷಣಗಳ ಆಧಾರದಲ್ಲಿ ಆ್ಯಪ್‌ನಲ್ಲಿ ಈ ಮೊದಲೇ ಅಳವಡಿಸಿರುವ ಇಮೇಜ್ ಆಯ್ಕೆ ಮಾಡುತ್ತಾ ಸಾಗಬೇಕು. ಬೆಳೆಗಳ ವಯಸ್ಸು, ಬಾಧೆಗೆ ಒಳಗಾಗಿರುವ ಭಾಗ, ರೋಗದ ಲಕ್ಷಣ, ರೋಗ ಹರಡಿದ ಪ್ರಮಾಣದ ಬಗ್ಗೆ ಆ್ಯಪ್‌ನಲ್ಲಿ ಸೂಚಿಸಬೇಕು. ಆನಂತರ ರೈತರ ಮೊಬೈಲ್ ಸಂಖ್ಯೆಗೆ ಸಂಪೂರ್ಣ ಮಾಹಿತಿ ಒಳಗೊಂಡ ಮೆಸೇಜ್ ಬರುತ್ತದೆ. ಇದರ ಆಧಾರದಲ್ಲಿ ರೈತರು ಔಷಧ ಪಡೆಯಬಹುದು.

ಆ್ಯಪ್ ವಿಶೇಷತೆ ಏನು?

ರೋಗ ಲಕ್ಷಣ ಹೊಂದಿರುವ ಕಾಯಿ, ಕಾಂಡ, ಹೂ, ಎಲೆ ಹೊಂದಿರುವ 52 ಬೆಳೆಗಳ ಇಮೇಜ್ ತಂತ್ರಾಂಶ ಅಳವಡಿಸಲಾಗಿದೆ. ರೋಗ ಲಕ್ಷಣದ ಚಿತ್ರವನ್ನು 'ತಜ್ಞರ ತಂತ್ರಾಂಶ' ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬೇಕು. ಆ್ಯಪ್ ಲಾಗಿನ್ ಐಡಿ ಹೊಂದಿದ ಕೃಷಿ ವಿಜ್ಞಾನಿಗಳಿಗೆ ಹೊಸ ರೋಗ ಲಕ್ಷಣದ ಮಾಹಿತಿ ಲಭ್ಯವಾಗುತ್ತದೆ. ಕ್ಷೇತ್ರಾಧಿಕಾರಿಗಳ ಮೂಲಕ ಕೃಷಿ ವಿಜ್ಞಾನಿಗಳು ರೋಗ ಪತ್ತೆಗೆ ಔಷಧ ನೀಡುವ ತಂತ್ರಜ್ಞಾನವೇ ಇ-ಸ್ಯಾಪ್.



ಏನೇನು ಅನುಕೂಲ?

- ಯಾವ ಭಾಗದಲ್ಲಿ ಯಾವ ಬೆಳೆಗೆ ಯಾವ ರೋಗ ಬಾಧೆ ಎಷ್ಟರ ಮಟ್ಟಿಗೆ ಹರಡಿದೆ ಎಂಬ ವರದಿಯನ್ನು ಗ್ರಾಫ್ ಮತ್ತು ಟೇಬಲ್ ಮೂಲಕ ನೀಡುತ್ತದೆ.
- ವರದಿ ಆಧರಿಸಿ ಬೆಳೆ ನಷ್ಟ ಪರಿಹಾರ, ವಿಮೆ ಅಂದಾಜಿಸಬಹುದು.
- ಕೃಷಿ ಉತ್ಪನ್ನ ಹಾಗೂ ಕ್ಷೇತ್ರದ ಮಾಹಿತಿ ಪಡೆಯಬಹುದು.

ಜಿಐಎಸ್ ತಂತ್ರಾಂಶದ ಮೂಲಕ ಆ್ಯಪ್ ಅಭಿವೃದ್ಧಿಪಡಿಸಲಾಗಿದೆ. ರೋಗಿಯ ಲಕ್ಷಣ ನೋಡಿ ವೈದ್ಯರು ಔಷಧ ಚೀಟಿ ನೀಡುವಂತೆ ಕೃಷಿ ವಿಜ್ಞಾನಿಗಳು ಆ್ಯಪ್ ಮೂಲಕ ರೈತರಿಗೆ ಬೆಳೆ ಬಾಧೆಗಳಿಗೆ ಔಷಧ ಚೀಟಿಯನ್ನು ನೀಡುವ ಸುಲಭ ತಂತ್ರಜ್ಞಾನ ಇದಾಗಿದೆ.

- ಡಾ. ಎ. ಪ್ರಭುರಾಜ್ ಪ್ರಧಾನ ಸಂಶೋಧಕ, ಕೃಷಿ ವಿವಿ, ರಾಯಚೂರು

01-07-2021 Vk Pg 04

ತೊಗರಿನಾಡಿನಲ್ಲಿ ಇಸ್ರೇಲ್ ಮಾದರಿ ನೀರಾವರಿ ಪದ್ಧತಿ

• ರಾಚಪ್ಪಾ ಜಂಬಗಿ

ಕಲಬುರಗಿ: ತೊಗರಿನಾಡಿನಲ್ಲಿ ಮೊದಲ ಬಾರಿಗೆ ಪ್ರಾಯೋಗಿಕವಾಗಿ 100 ಎಕರೆ ಪ್ರದೇಶದಲ್ಲಿ ಇಸ್ರೇಲ್ ಮಾದರಿ ನೀರಾವರಿ ಪದ್ಧತಿ ಅಳವಡಿಸಿಕೊಂಡು ಬೆಳೆ ಬೆಳೆಯುವ ಮೂಲಕ ಕೃಷಿ ಕ್ಷೇತ್ರದಲ್ಲಿ ವಿನೂತನ ಹೆಜ್ಜೆಯಿಡುವತ್ತ ತಯಾರಿ ನಡೆಯುತ್ತಿದೆ.

ರಾಜ್ಯದಲ್ಲಿ ಮೊದಲ ಪ್ರಯೋಗ

ಇಸ್ರೇಲ್‌ನಲ್ಲಿ ಅನುಷ್ಠಾನಗೊಳಿಸಿರುವ ನೀರಾವರಿ ಪದ್ಧತಿಯನ್ನು ತೊಗರಿನಾಡು ಕಲಬುರಗಿಯಲ್ಲಿ ಜಾರಿಗೊಳಿಸಲು ಯೋಜನೆ ಹಾಕಿಕೊಂಡಿದ್ದು, ಅದಕ್ಕಾಗಿ ಈಗ ಜಿಲ್ಲೆಯ ಪ್ರತಿ ತಾಲೂಕಿನಲ್ಲಿ ಕೃಷಿ, ತೋಟಗಾರಿಕೆ, ರೇಷ್ಮೆ, ಹಣ್ಣು ತರಕಾರಿ ಬೆಳೆಯಲು ಹೊಸ ಪದ್ಧತಿಗಳನ್ನು ರೂಪಿಸಲಾಗುತ್ತಿದೆ. ➘ ಳ

“ **ನೀರಾವರಿ ಅಭಿವೃದ್ಧಿಪಡಿಸಲು ಹೊಸ ಯೋಜನೆ ಹಾಕಿಕೊಂಡು, ರೈತರಲ್ಲಿ ನೀರಾವರಿ ಬಗ್ಗೆ ಅರಿವು ಹೆಚ್ಚಿಸುವ ಮೂಲಕ ಕೃಷಿಯಲ್ಲಿ ಸಾಧನೆ ಮಾಡಲಾಗುವುದು. ಅದಕ್ಕಾಗಿ ಕಲ್ಯಾಣ ಕರ್ನಾಟಕ ಕೃಷಿ ಮತ್ತು ಸಾಂಸ್ಕೃತಿಕ ಸಂಘ, ನೀರಾವರಿ ತಜ್ಞರ, ಮಾದರಿ ರೈತರ ಸಹಕಾರ ಪಡೆದುಕೊಂಡು ಕೆಲಸ ಆರಂಭಿಸಲಾಗುವುದು.**

■ **ಮುರುಗೇಶ ನಿರಾಣಿ,** ಗಣಿ ಮತ್ತ ಭೂ ವಿಜ್ಞಾನ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ

01-07-2021 Hd Pg 01

ಕೃಷಿ ವಿ.ವಿ: ಶೇ 45 ರಷ್ಟು ಬೋಧಕ ಹುದ್ದೆಗಳು ಖಾಲಿ

ಬೆಂಗಳೂರು: ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಶೇ 45ರಷ್ಟು ಬೋಧಕ ಮತ್ತು ಶೇ 55ರಷ್ಟು ಬೋಧಕೇತರ ಹುದ್ದೆಗಳ ಕೊರತೆ ಇದ್ದು, ಅವುಗಳ ಭರ್ತಿಗೆ ಕ್ರಮ ತೆಗೆದುಕೊಳ್ಳಬೇಕು ಎಂದು ವಿವಿಧ ಕೃಷಿ ವಿಶ್ವವಿದ್ಯಾಲಯಗಳ ಕುಲಪತಿಗಳು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಮನವಿ ಮಾಡಿದ್ದಾರೆ.

ಅಲ್ಲದೆ, ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣ ಮತ್ತು ಸಂಶೋಧನೆಗೆ 2016-17 ರಿಂದ ಈಚೆಗೆ ಶೇ 65ರಷ್ಟು ಅನುದಾನ ಕಡಿತಗೊಂಡಿದೆ ಎಂದೂ ಅವರು ಮುಖ್ಯಮಂತ್ರಿ ಗಮನಕ್ಕೆ ತಂದರು.

ಮಾನವ ಸಂಪನ್ಮೂಲ ಕೊರತೆ ವಿದ್ಯಾರ್ಥಿಗಳ ಕಲಿಕೆಯ ಮೇಲೂ ಪರಿಣಾಮ ಬೀರುತ್ತಿದೆ ಎಂದು ನಿಯೋಗದ ನೇತೃತ್ವ ವಹಿಸಿದ್ದ ಕೃಷಿ ಸಚಿವ ಬಿ.ಸಿ. ಪಾಟೀಲ ಅವರು ಹೇಳಿದರು.

01-07-2021 Pv Pg 3D